## ಜಾನಕಿಯದೂ ಅನುಚಿತ ಪ್ರಶ್ನೆ!

ವರುಣ್ ವೈಭವ್ ಪ್ರಕರಣದ ಸಂಬಂಧ ತನಿಖೆಯ ಬಗೆಗೆ ಕುತೂಹಲಕ್ಕೆಂದು ಕೇಳಿದ ಮಧುಕರನಿಗೆ ಜಾನಕಿ 'ನೀನು ಹಾಗೆಲ್ಲಾ ತನಿಖೆಯ ವಿಚಾರವನ್ನು ಕೇಳಬಾರದು' ಎಂದಿರುತ್ತಾಳೆ. ಆದರೆ ಇದೇ ಜಾನಕಿ ಸದರಿ ಪ್ರಕರಣದ ಕುರಿತಂತೆ ಸಿಎಸ್ಪಿ ಮನೆಗೆ ಬರುವಾಗ ಮಧುಕರನ ಭೇಟಿಯಾಗುತ್ತದೆ. ಇಬ್ಬರ ಮಾತಿನ ನಡುವೆ ಮಧುಕರ ವರುಣ್ ವೈಭವ್‌ನ ಕೇಸನ್ನು ತಮ್ಮ ಭೂಷಣ್ ಅಂಡ್ ಭೂಷಣ್ ಕಂಪನಿ ವಹಿಸಿಕೊಂಡಿರುವುದಾಗಿ, ತಾನು ಈ ಕೇಸಿನ ವಕೀಲೆ ಶೀಲಾ ಭೂಷಣ್‌ರ ಸಹಾಯಕನಾಗಿರುವುದಾಗಿ ಹೇಳಿದಾಗ ಜಾನಕಿ 'ನೀನೇಕೆ ಶೀಲಾ ಭೂಷಣ್ ಅಸೋಸಿಯೇಟ್ ಆಗಲು ಒಪ್ಪಿಕೊಂಡೆ?' ಎಂದು ಪ್ರಶ್ನಿಸುತ್ತಾಳೆ. ಆಗ ಮಧುಕರ ತನಗೆ ಒಪ್ಪಿಕೊಳ್ಳದೆ ಇನ್ನೇನು ದಾರಿಯಿತ್ತು ಎಂದುತ್ತರಿಸುತ್ತಾನೆ. ಮಧುಕರ ವೃತ್ತಿ ನಡೆಸುತ್ತಿರುವುದು ಭೂಷಣ್ ಅಂಡ್ ಭೂಷಣ್ ಕಂಪನಿಯಲ್ಲಿ ಎಂದು ಗೊತ್ತಿದ್ದೂ ಜಾನಕಿ ಇಂತಹ ಪ್ರಶ್ನೆ ಕೇಳುವುದು (ಅದಕ್ಕೇನೇ ಸಮರ್ಥನೆಯಿದ್ದರೂ) ಅನುಚಿತವಾದದ್ದಲ್ಲವೇ?

—ಕೆ.ವಿ. ಮಂಜುನಾಥ್ ಕುಂಟುಗೋಡು ವರದಾಮೂಲ

## 'ಚಂದ'ದ ಕಾರ್ಯಕ್ರಮಗಳು

ಚಂದನವಾಹಿನಿಯ ಎಲ್ಲ ಕಾರ್ಯಕ್ರಮಗಳೂ ತುಂಬಾ ಚೆನ್ನಾಗಿವೆ. ಎಲ್ಲ ವಯೋಮಾನದವರ ಅಭಿಲಾಷೆಯನ್ನು ಅರಿತು ಜಾತಿ– ಧರ್ಮ ಭೇದವಿಲ್ಲದೆ ಅತ್ಯುತ್ತಮ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಜ್ಞಾನಕ್ಕೆ, ಆರೋಗ್ಯಕ್ಕೆ, ಸಂತೋಷಕ್ಕೆ, ವಿಜ್ಞಾನದ ಆಗು ಹೋಗುಗಳ ವಿಚಾರವನ್ನು ತಿಳಿಸುತ್ತಿದಾರೆ. ಪ್ರತಿ ಸೋಮವಾರ ಬೆಳಿಗ್ಗೆ 11.30ರಿಂದ 12 ರವರೆಗೆ 'ಸಖಿ'ಯ ನೇರ ಕಾರ್ಯಕ್ರಮ ಚೆನ್ನಾಗಿ ಮೂಡಿಬರುತ್ತಿದೆ.

ಬುಧವಾರದ 'ಟೀವಿ ಡಾಕ್ಟರ್' ಸಾರ್ವಜನಿಕರಿಗೆ ಆರೋಗ್ಯ ಮಾಹಿತಿಯನ್ನು ತಿಳಿಸುತ್ತದೆ. ಶುಕ್ರವಾರದಂದು ಬರುವ 'ಜೀವನ ದರ್ಶನ'ದಿಂದ ಸಮಾಜದಲ್ಲಿ ಉತ್ತಮವಾಗಿ ಬಾಳುವ ರೀತಿ, ಸಂಸ್ಕೃತಿಯನ್ನು ತಿಳಿಸಿ ಕೊಡುತ್ತದೆ. ಮಂಗಳವಾರ, ಗುರುವಾರದ 'ಹಲೋ ಗೆಳೆಯರೆ' ಸಮಾಜದಲ್ಲಿ ಆಗುತ್ತಿರುವ ಬದಲಾವಣೆ, ಜೀವನದ ಮೌಲ್ಯ ತಿಳಿಸುವ ಕಾರ್ಯಕ್ರಮವಾಗಿದೆ. ನಾನು ಈ ಕಾರ್ಯಕ್ರಮವನ್ನು ತಪ್ಪದೆ ವೀಕ್ಷಿಸಿ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ 12 ವರ್ಷದಿಂದ ಸತತವಾಗಿ ಕರೆಮಾಡಿ ಹಲವು ಮಾಹಿತಿಯನ್ನು ತಿಳಿದುಕೊಂಡಿದ್ದೇನೆ.

—ಎಂ.ಎಸ್. ಉಷಾ ಪ್ರಕಾಶ್ ಮೈಸೂರು

ವಾರದ ಪತ್ರ

## ಸಂಸಾರ ಸಂಹಾರಿಣಿಯರಲ್ಲ!

ಕಲರ್ಸ್ ಸೂಪರ್‌ನ ಮಗಳು ಜಾನಕಿ ಹಲವು ಕಾರಣಗಳಿಂದ ವೀಕ್ಷಕರ ಮನ ಗೆದ್ದಿದೆ. ಸ್ತ್ರೀಪರ ಕಾಳಜಿಯುಳ್ಳ ಮಾನವೀಯತೆಗೆ ಮಿಡಿಯುವ ಪಾತ್ರಗಳು ನೈಜ ಅಭಿನಯದಿಂದ ವಿಶಿಷ್ಟವೆನಿಸುತ್ತವೆ. ರಶ್ಮಿ, ಶ್ಯಾಮಲಾ, ದೇವಕಿ, ಜಾನಕಿ, ಮೈತ್ರಿ, ಚಂಚಲಾ, ಸಂಜನಾ ಈ ಎಲ್ಲಾ ಪಾತ್ರಗಳು ಸ್ತ್ರೀ ಸಹಜವಾಗಿ ಕಾಣಿಸುತ್ತಾರೆ. ಮಕ್ಕಳ ಕುರಿತ ವಾತ್ಸಲ್ಯದಿಂದ ವೀಕ್ಷಕರಿಗೆ ಹತ್ತಿರವಾಗುತ್ತಿದ್ದಾರೆ. ಹಾಗೆಂದು ಅವರು ದುರ್ಬಲ ವ್ಯಕ್ತಿತ್ವಗಳಲ್ಲ. ಸಂಸಾರದ ಕಷ್ಟಪರಂಪರೆಯನ್ನು ಎದುರಿಸುತ್ತಾ ಕುಟುಂಬ ವ್ಯವಸ್ಥೆಯನ್ನು ಕಾಪಾಡುತ್ತಿರುವ ಸಬಲೆಯರು.

ಮೊದಲ ಪತಿಯ ವಿಕ್ಷಿಪ್ತತೆಯಿಂದ ಬೇಸತ್ತು ಚಂದು ಭಾರ್ಗಿಯನ್ನು ಮದುವೆಯಾಗಿದ್ದರೂ ಅವನ ದುಷ್ಟತನವನ್ನು ಒಪ್ಪದೇ ಮನದಲ್ಲೇ ಕೊರಗುತ್ತಿರುವ ರಶ್ಮಿ, ಯಾವುದೋ ಭಯದಿಂದ ಕಂಡಲ್ಲಿ ಅಲೆಯುತ್ತಿರುವ ಪತಿಯ ಬಗ್ಗೆ ಚಿಂತಿಸುತ್ತಾ ತನ್ನ ಮೂರು ಮಕ್ಕಳ ಹಿತಕ್ಕಾಗಿ ಕಷ್ಟ ಪಡುತ್ತಿರುವ ದೇವಕಿ, ಮಗಳು ನಾಪತ್ತೆಯಾದ ದುಃಖ ವಿದೇಶದಲ್ಲಿ ನೆಲೆಸಿ ತಾಯಿಯನ್ನೇ ಮರೆತ ಮಗನ ಬಗ್ಗೆ ವೇದನೆ ಅನುಭವಿಸುತ್ತಾ ಆ ವಯಸ್ಸಿನ ಅಣ್ಣನ ಮಕ್ಕಳ ಮೇಲೆ ತನ್ನ ಮಮತೆ ಸುರಿಸುತ್ತಿರುವ ಶ್ಯಾಮಲಾ (ಪತಿ, ಮ್ಯಾಜಿಕ್ ಮಾಡಿ ಹಣ ಕಳೆಯುವ ಬೇಜವಾಬ್ದಾರಿ ಮನುಷ್ಯ) ಇವರೆಲ್ಲಾ ಈಗಿನ ಕಾಲದಲ್ಲಿ ನಾನಾ ಕಾರಣಗಳಿಂದ ಮಕ್ಕಳಿಂದ ದೂರವಿರುವ ತಾಯಂದಿರ ದುಃಖದ ಸಂಕೇತದಂತಿದ್ದಾರೆ. ಜಾನಕಿ ತನ್ನ ಮೋಸದ ಮದುವೆಯನ್ನು ನುಂಗಿಕೊಂಡು ಸತತ ಪ್ರಯತ್ನದಿಂದ ತನ್ನ ವ್ಯಕ್ತಿತ್ವ ಬೆಳೆಸಿಕೊಳ್ಳುತ್ತ ಪತಿಯನ್ನು ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಪ್ರೇರಕ ಶಕ್ತಿಯಾಗಿದ್ದಾಳೆ.

—ವಿಜಯಾ ಶ್ರೀಧರ್, ಶಿವಮೊಗ್ಗ

## 'ಸೂಪರ್' ದ್ವಂದ್ವಾರ್ಥ ಬೇಡ

ಕಲರ್ ಸೂಪರ್‌ನ 'ಸೂಪರ್ ದಂಪತಿ'ಯನ್ನು ಮುರಳಿ ನಡೆಸಿಕೊಡುತ್ತಿದ್ದು, ಜನಪ್ರಿಯ ಆಟವೆಂದು ವಾಹಿನಿ ಹೇಳಿದೆ. ಸ್ಪರ್ಧಿಗಳೊಂದಿಗೆ ಮಾತನಾಡುವಾಗ ದ್ವಂದ್ವಾರ್ಥದ ಪದಗಳನ್ನು ಬಳಸಿ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸುತ್ತಿರುವುದು ಮಾತ್ರ ದುರಂತ. ಇದು ಒಂದೆರಡು ಕಂತುಗಳಲ್ಲಿ ಆಕಸ್ಮಿಕವಾಗಿ ನುಸುಳಿರಬಹುದೆಂದು ಭಾವಿಸಿದ್ದೆ. ಆದರೆ, ಸೋಮವಾರದಿಂದ ಶುಕ್ರವಾರದವರೆಗೂ ಮುಂದುವರಿದಿದೆ. ವಾಹಿನಿ ಇನ್ನಾದರೂ ಎಚ್ಚೆತ್ತು ಕೊಳ್ಳುವುದು ಸೂಕ್ತ. ಅವರು ಬಳಸುವ ಪದಗಳನ್ನು ಇಲ್ಲಿ ಉಲ್ಲೇಖಿಸಲು ಮುಜುಗರವಾಗುತ್ತದೆ.

—ಸಿಹಿಮೊಗೆ ರಮೇಶ್, ಮೈಸೂರು.

## ನಿರಾಶೆಯಾಯಿತು

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ ಸರಿಗಮಪ ಲಿಟಲ್ ಚಾಂಪ್ಸ್ ಫಿನಾಲೆಯಲ್ಲಿ ಅಭಿಸ್ವಂತ್ ಚೆನ್ನಾಗಿ ಹಾಡಿದರು. ಅವರು ಎರಡನೇ ಸ್ಥಾನಕ್ಕೆ ಅರ್ಹರಿದ್ದರು. ಕೊನೇ ಪಕ್ಷ ಮೂರನೇ ಸ್ಥಾನವಾದರೂ ಸಿಗಬೇಕಾಗಿತ್ತು. ಆದರೆ ಅಂದು ನೀಡಿದ ತೀರ್ಪು ಬಹಳ ನಿರಾಶಾದಾಯಕ ಎಂದೆನಿಸುತ್ತದೆ.

—ಲಲಿತಾ ಶಾಸ್ತ್ರಿ ಬೆಂಗಳೂರು

## ನೋಡುವ ಶಾಪ

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ! ಆದರೆ... ಸ್ಟೇಜಿನ ಮಧ್ಯೆ ಶಾಶ್ವತ ಫಸ್ಟ್ ನೈಟ್ ನಡೆಸಲು ಮಂಚ ಇರಿಸಿ, ಪ್ರತಿನಿತ್ಯ ಪರಸತಿಯೊಂದಿಗೆ ಸರಸಸಲ್ಲಾಪ ನಡೆಸುತ್ತಾ ಅಕ್ರಮ ಸಂಬಂಧಗಳನ್ನೇ ಮೆರೆಸುತ್ತಾ, ಅಶ್ಲೀಲ ಸಂಭಾಷಣೆಗಳನ್ನು ಪರಮಾವಧಿಯ ಮಟ್ಟಕ್ಕೇರಿಸಿ, ದ್ವಂದ್ವಾರ್ಥಗಳಿಂದಲೇ ಪ್ರಸಿದ್ಧಿಯಾಗಲು ಹವಣಿಸುತ್ತಾ, ಕಲಾವಿದರ ಅವಾಚ್ಯ ಅಪಹಾಸ್ಯಗಳಿಗೆ ಅಸಹಜವಾಗಿ ಪಕಪಕನೆ ನಗುವ ಮಜಾಭಾರತದ ತೀರ್ಪುಗಾರರ ನಟನೆಯನ್ನು ನೋಡುವ ಶಾಪವನ್ನು ಬೇಡಿಕೊಳದಿರು!

—ಪಿ.ಜೆ. ರಾಘವೇಂದ್ರ, ನ್ಯಾಯವಾದಿ ಮೈಸೂರು

## ಅಸಹನೀಯ ಧಾರಾವಾಹಿ

ಕಲರ್ಸ್‌ನ 'ಕಿನ್ನರಿ' ಎಂದು ಮುಗಿಯುವುದೋ ಎನ್ನುವಷ್ಟು ಬೇಸರವಾಗಿದೆ. ಕಥೆಗೆ ಮೊದಲು, ಕೊನೆಯೇ ಇಲ್ಲ. ಧಾರಾವಾಹಿಯಲ್ಲಿ ಬರುವ ಸನ್ನಿವೇಶಗಳು ಒಂದಕ್ಕೊಂದು ಸಂಬಂಧವೇ ಇಲ್ಲ. ವೀಕ್ಷಕರಿಗೆ ನಿರ್ದೇಶಕರು ಏನನ್ನು ಹೇಳುತ್ತಿದ್ದಾರೆ ಎನ್ನುವುದು ಬಹುಶಃ ಅವರಿಗೇ ಗೊತ್ತಿಲ್ಲವೆನಿಸುತ್ತದೆ. ಈ ರೀತಿಯ ಧಾರಾವಾಹಿಗಳು ವೀಕ್ಷಕರ ಸಹನೆಯನ್ನು ಪರೀಕ್ಷಿಸುವಂತಿದೆ.

—ಎಸ್. ರವೀಂದ್ರನಾಥ ಬೆಂಗಳೂರು

## ಸ್ಪರ್ಧೆಯೋ– ಸಹಾನುಭೂತಿಯೋ

ಅಂತಿಮ ಸುತ್ತಿನವರೆಗೂ ಚೆನ್ನಾಗಿಯೇ ಮೂಡಿಬರುವ ಸರಿಗಮಪ ಹಾಡಿನ ಸ್ಪರ್ಧೆ, 'ಗ್ರಾಂಡ್ ಫಿನಾಲೆ'ಯಲ್ಲಿ ಸಹಾನುಭೂತಿ ಸ್ಪರ್ಧೆಯಾಗಿ ಬದಲಾಗುತ್ತಿದೆ. ಮೊದಲಿನಿಂದ ಕಡೆಯವರೆಗೂ ತುಂಬಾ ಸೊಗಸಾಗಿ ಹಾಡಿ ಬಂದ ಸ್ಪರ್ಧಿಗಳಿಗೆ ಬಹುಮಾನ ಸಿಗದೇ, ಅದು ಬೇರೆ ಯಾವ ಸ್ಪರ್ಧಿಯ ಪಾಲಾಗುತ್ತಿರುವುದು ವಿಪರ್ಯಾಸ.

ಪ್ರತಿ ಸುತ್ತಿನಲ್ಲೂ ಅರ್ಹ ಸ್ಪರ್ಧಿಗಳಿಗೆ ಒಳ್ಳೆಯ ಕಾಮೆಂಟ್ಸ್ ಅನ್ನೇ ನೀಡುವ ತೀರ್ಪುಗಾರರು, ಅಂತಿಮ ಸುತ್ತಿನಲ್ಲಿ ಮೊದಲೇ ತೀರ್ಮಾನ ತೆಗೆದುಕೊಂಡಂತೆ ಬೇಕಾಬಿಟ್ಟಿಯಾಗಿ ಕಾಮೆಂಟ್ಸ್ ಕೊಡುವುದು ವೀಕ್ಷಕರಲ್ಲಿ ಬೇಸರ ತರಿಸುತ್ತಿದೆ. ಹೀಗೆ ಆದರೆ ಈ ಸಂಗೀತದ ಕಾರ್ಯಕ್ರಮವನ್ನು ನೋಡುವವರ ಸಂಖ್ಯೆ ಕಡಿಮೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

—ವಿಭಾ ಶ್ರೀನಿವಾಸ್, ಮೈಸೂರು

